ಒಬ್ಬ ಮಾನ್ಯ ಸದಸ್ಯರು:– ಹಾಸನ ತಾಲ್ಲೂಕ್ ಮಾತ್ರ ವರ್ಗಾವಣೆಯಾಗಿದೆಯೋ ಅಥವಾ ರಾಜ್ಯದಲ್ಲಿನ ಕೆರೆಗಳೆಲ್ಲ ಜಿಲ್ಲಾ ಪರಿಷತ್ತಿನಿಂದ ಪಿ. ಡಬ್ಲೂ ಯ.ಡಿ. ಇಲಾಖೆಗೆ ವರ್ಗಾವಣೆಯಾಗಿದೆಯೋ ನನಗೆ ಅರ್ಥವಾಗುತ್ತಿಲ್ಲ.

ಶ್ರವಣಬೆಳಗೊಳದಲ್ಲಿ ನೀರಿನ ಅಭಾವ

418 ಶ್ರೀ ಎನ್.ಬಿ. ನಂಜಪ್ಪ (ಶ್ರವಣಬೆಳಗೊಳ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:–

ಅ) ಶ್ರವಣಬೆಳಗೊಳ ಕ್ಷೇತ್ರದಲ್ಲಿ ಕುಡಿಯುವ ನೀರಿನ ಕೊಳವೆ ಬಾವಿಗಳ ಸಂಖ್ಯೆ ಎಷ್ಟು, ಇವುಗಳಲ್ಲಿ ಸರಿಯಾಗಿ ಕೆಲಸ ಮಾಡುವ ಕೆಟ್ಟುಹೋಗಿರುವ ಹಾಗೂ ಹಾಳಾಗಿರುವ ಬಾವಿಗಳ ಸಂಖ್ಯೆ ಎಷ್ಟು;

ಆ) ಈಗ ಹೊಸದಾಗಿ ಈ ವರ್ಷ ಕೊರೆದಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ಬರಗಾಲವಿದ್ದರೂ ಇದರ ಬಗ್ಗೆ ಎಷ್ಟು ಕೇಳಿಕೊಂಡರೂ ಸರ್ಕಾರ ಕ್ರಮ ತೆಗೆದುಕೊಳ್ಳದೇ ಇರಲು ಕಾರಣಗಳೇನು;

ಇ) ಶೀಘ್ರವಾಗಿ ಬರಗಾಲಕ್ಕೆ ತುತ್ತಾಗಿರುವ ಈ ಕ್ಷೇತ್ರದ ನೀರಿನ ಬವಣೆಯನ್ನು ಯಾವಾಗ ಸರಿಪಡಿಸಲಾಗುವುದು?

ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು):–

ಅ) ಕುಡಿಯುವ ನೀರಿನ ಬಾವಿಗಳ ಸಂಖ್ಯೆ 1150 ಇವುಗಳಲ್ಲಿ ಸರಿಯಾಗಿ ಕೆಲಸ ಮಾಡುವ ಸಂಖ್ಯೆ 1056 ಕೆಟ್ಟು ಹೋಗಿರುವ ಮತ್ತು ಹಾಳಾಗಿರುವ ಸಂಖ್ಯೆ 94.

ಆ) ಈ ವರ್ಷ ಹೊಸದಾಗಿ 30 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಇವುಗಳಲ್ಲಿ 18 ಸಮಸ್ಯಾತ್ಮಕ ಹಳ್ಳಿಗಳೂ ಸೇರಿವೆ.

ಇ) ಸಮಸ್ಯಾತ್ಮಕ ಹಳ್ಳಿಗಳಿಗೆ ಆದ್ಯತೆಯ ಮೇರೆಗೆ ನೀರು ಪೂರೈಕೆ ಕಾರ್ಯ ಕ್ರಮ ಯೋಜಿಸಿ ನಿರ್ವಹಿಸಲು ಈಗಾಗಲೆ ಜಿಲ್ಲಾ ಪರಿಷತ್‌ಗಳಿಗೆ ಸೂಕ್ತ ಸೂಚನೆ ನೀಡಲಾಗಿದೆ.

SRI N.B. Nanjappa :- Will the Hon'ble Minister for Rural Development and Panchayati Raj be pleased to state the total number of borewells in Shravanabelgola constituency; out of which the total number of borewells functioning ; How many borewells are out of order; how many new borewells dug during this year; The reasons for not taking any action in spite of the request from the people that there is a drought. When the problem in drought stricken constituency will be solved by the Minister?

ಶ್ರೀ ಬಿ. ಬಸವಲಿಂಗಪ್ಪ:– ನೀವು ಕೇಳಿದ ಪ್ರಶ್ನೆ ಅರ್ಥವಾಗಲಿಲ್ಲ

ಶ್ರೀ ಎನ್. ಬಿ. ನಂಜಪ್ಪ:– ಅಧ್ಯಕ್ಷರೆ, ನನ್ನ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ ಎಷ್ಟು ಬೋರ್‌ವೆಲ್‌ಗಳನ್ನು ಕೊರೆಯಿಸಿದ್ದಾರೆ ಅವುಗಳಲ್ಲಿ ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿವೆ? ಕುಡಿಯುವ ನೀರನ್ನು ಒದಗಿಸುತ್ತಿರುವ ಬೋರ್‌ವೆಲ್‌ಗಳ ಸಂಖ್ಯೆ ಎಷ್ಟು ? ಕಳೆದ ಮೂರು ವರ್ಷದಿಂದ ಮಳೆ ಬಾರದಿದ್ದು, ಇದರ ಕಡೆ ಗಮನ

ಹರಿಸಿದ್ದಾರೆಯೆ? ಗಮನ ಹರಿಸಿದ್ದರೆ, ಈಗ ಎಷ್ಟು ಬೋರ್‌ವೆಲ್‌ಗಳನ್ನು ತೆಗೆಸಿದ್ದಾರೆ? ಎಷ್ಟು ಬೋರ್‌ವೆಲ್‌ಗಳನ್ನು ತೆಗೆಸಲು ಮನಸ್ಸು ಮಾಡಿದ್ದಾರೆ? ಅರ್ಥವಾಗಿದ್ದರೆ, ದಯವಿಟ್ಟು ಹೇಳಿ?

ಶ್ರೀ ಬಿ. ಬಸವಲಿಂಗಪ್ಪ:– ನಿಮ್ಮ ತಾಲ್ಲೂಕಿನಲ್ಲಿ ಎಷ್ಟು ಬೋರ್‌ವೆಲ್‌ಗಳನ್ನು ತೆಗೆಯಬೇಕಾಗಿತ್ತೋ ಅಷ್ಟನ್ನು ತೆಗೆದಿದ್ದಾರೆ.

ಶ್ರೀ ಎನ್. ಬಿ. ನಂಜಪ್ಪ:– ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಈ ತರಹ ಇರ್ರೆಸ್ಪಾನ್ಸಿಬಲ್ ಉತ್ತರ ಕೊಡಬಾರದೆಂದು ಕೇಳಿಕೊಳ್ಳುತ್ತೇನೆ. ಕುಡಿಯುವ ನೀರಿನ ಅಭಾವ ಎಷ್ಟಿದೆ ಎಂದು ಅವರು ಅಲ್ಲಿ ಹೋಗಿ ನೋಡಿದ್ದರೆ ಗೊತ್ತಾಗುತ್ತಿತ್ತು. ಅಲ್ಲಿ ಹೋಗಿ ನೋಡದೆ ಅವರು ಈ ರೀತಿಯಾಗಿ ಮಾತನಾಡುತ್ತಿದ್ದಾರೆ. They must understand the difficulty of the villagers. For the last three years there is no rain. ಕೆರೆಗಳಲ್ಲಿ ಕಟ್ಟೆಗಳಲ್ಲಿ ಹಳ್ಳಗಳಲ್ಲಿ ಮತ್ತು ಬಾವಿಗಳಲ್ಲಿ ನೀರಿಲ್ಲ ಸರ್ಕಾರಕ್ಕೆ ಎಷ್ಟೋ ಪತ್ರಗಳನ್ನು ಬರೆಯಲಾಗಿದೆ. ಅವರಿಂದ ಉತ್ತರ ಬಂದಿಲ್ಲ. ಕೇಳಿದರೆ ಈ ತರಹ ಹೇಳುತ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ:– ಅಭಾವ ಪರಿಸ್ಥಿತಿ ಇದೆಯೆಂದು ನೀವು ಹೇಳುತ್ತಿದ್ದೀರಿ ಇದನ್ನು ಸರ್ಕಾರದವರು ತನಿಖೆ ಮಾಡಿ ಹೇಳಬೇಕು. ಯಾವ ಗ್ರಾಮದಲ್ಲಿ ನೀರಿನ ಅಭಾವ ಇದೆಯೆಂದು ನೀವು ಹೇಳಿದರೆ ಕ್ರಮ ತೆಗೆದುಕೊಳ್ಳಬಹುದು. ಅದನ್ನು ಬಿಟ್ಟು ನಾವು ಬೇಜವಾಬ್ದಾರಿಯಿಂದ ಉತ್ತರ ಕೊಡುತ್ತಿದ್ದೇವೆಂದು ಹೇಳಿದರೆ ಹೇಗೆ?

SRI N. B. Nanjappa:- The Secretary Rural Development and Panchayati Raj Department has visited the place.

ಅವರಿಂದ ಸರ್ಕಾರಕ್ಕೆ ರಿಪೋರ್ಟ್ ಬಂದಿದೆ. ಆದರೂ ಇಲ್ಲಿಯವರೆಗೆ ನೀವು ನಮ್ಮ ಡಿಫಿಕಲ್ಟೀಸನ್ನು ಅರ್ಥಮಾಡಿಕೊಂಡು ಈ ಸಮಸ್ಯೆಯನ್ನು ಬಗೆಹರಿಸಿಲ್ಲ ಈ ತರಹ ಉತ್ತರ ಕೊಟ್ಟರೆ ಹೇಗೆ?

ಶ್ರೀ ಬಿ. ಬಸವಲಿಂಗಪ್ಪ:– ಇದು ನಮ್ಮ ಗಮನಕ್ಕೆ ಬಂದಿಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಮಂತ್ರಿಗಳೇ, ನೀವು ನಿಮ್ಮ ಕಾರ್ಯಾಲಯದ ಮುಖಾಂತರ ಒಂದು ಸುತ್ತೋಲೆಯನ್ನು ಕಳುಹಿಸಿದ್ದೀರಿ. ಅಧ್ಯಕ್ಷರೆ, ತಾವು ಅಪ್ಪಣೆ ಕೊಟ್ಟರೆ ನಾನು ಅದನ್ನು ಓದುತ್ತೇನೆ.

Mr. Speaker:- This is Question Hour,

PROF. M. D. Nanjundaswamy: I know that this is Question Hour. The question which I am asking is connected with the question and the type of answers that are being given by the Ministers.

ಮಂತ್ರಿಗಳೇ, ತಮ್ಮ ಸುತ್ತೋಲೆ ನನಗೆ ಅನ್ವಯಿಸುವುದಿಲ್ಲ. ಏಕೆಂದರೆ ಕ್ವೆಸ್ಚನ್ ಅವರ್‌ನ್ನು ಗಂಭೀರವಾಗಿ ತೆಗೆದುಕೊಳ್ಳುವ ಸದಸ್ಯರಲ್ಲಿ ನಾನು ಒಬ್ಬ. ಆದರೆ ಸನ್ಮಾನ್ಯ ಮಂತ್ರಿಗಳು ಶ್ರೀ ನಂಜಪ್ಪನವರ ಪ್ರಶ್ನೆಗೆ ಹಾಗು ಈ ಹಿಂದೆ ಮತ್ತೊಬ್ಬ ಸದಸ್ಯರಿಗೆ ಕೊಟ್ಟ ಉತ್ತರ ಸರಿಯಿಲ್ಲ. ಈ ಸುತ್ತೋಲೆಯನ್ನು ಮಂತ್ರಿಗಳು ಕೇವಲ ತಮ್ಮ ಕಾರ್ಯಾಲಯಕ್ಕೆ ಕಳುಸಿಕೊಡಬೇಕು. We do not expect such irresponsible behaviour at all from these Ministers. ನಾವಿಲ್ಲಿ ತಮಾಷೆಗೆ ಬಂದಿಲ್ಲ,

ಹುಡುಗಾಟಕ್ಕೆ ಬಂದಿಲ್ಲ ಅಥವಾ ಮೋಜು ಮಾಡುವುದಕ್ಕೆ ಬಂದಿಲ್ಲ ಇದನ್ನು ಈ ಸರ್ಕಾರ ದಯವಿಟ್ಟು ತಿಳಿದುಕೊಳ್ಳಬೇಕು. ಶ್ರೀ ನಂಜಪ್ಪನವರು ಕೇಳಿರುವ ಪ್ರಶ್ನೆಯಲ್ಲಿ ಕೇವಲ ಅಂಕಿ ಅಂಶಗಳ ಉತ್ತರ ಇದೆ, ಶ್ರವಣಬೆಳಗೊಳದಲ್ಲಿ ಎಷ್ಟು ಬಾವಿ ತೋಡಿದ್ದಾರೆ ಎಂದು ಅಷ್ಟೂ ಗೊತ್ತಿಲ್ಲದೇ ಹೋದರೆ ಮಂತ್ರಿಗಳು ಏಕಾಗಬೇಕು? ನಾನು ಇದನ್ನು ಬಸವಲಿಂಗಪ್ಪನವರಿಗೆ ಮಾತ್ರ ಹೇಳುತ್ತಿಲ್ಲ. ಎಲ್ಲಾ ಮಂತ್ರಿಗಳಿಗೂ ಹೇಳುತ್ತಿದ್ದೇನೆ. The Ministers must acquaint themselves with the answers. they must study at home and then come to the House; otherwise, I will boycott this house for the rest of the term.

ಶ್ರೀ ಎನ್. ಬಿ. ನಂಜಪ್ಪ:– ಮಾನ್ಯ ಅಧ್ಯಕ್ಷರೆ, ನಾನು ಈ ಪ್ರಶ್ನೆಯನ್ನು ಕೇಳುತ್ತಿರುವ ಕಾರಣವೇನೆಂದರೆ, ಇದರ ಬಗ್ಗೆ ಅನೇಕ ಪತ್ರಗಳನ್ನು ಸರ್ಕಾರಕ್ಕೆ ಬರೆದಿದ್ದೇವೆ. ಇದರ ಜೊತೆಗೆ ರೂರಲ್ ಡೆವೆಲಂಪ್‌ಮೆಂಟ್ ಸೆಕ್ರೆಟರಿಯವರು. ರೆವಿನ್ಯೂ ಇಲಾಖೆಯ ಡೆಪ್ಯೂಟಿ ಡೈರೆಕ್ಟರ್‌ರವರು ಹಾಗೂ ಅನೇಕ ಅಧಿಕಾರಿಗಳು ಈ ಸ್ಥಳಕ್ಕೆ ಭೇಟಿ ನೀಡಿದ್ದಾರೆ ಹಾಗೂ ಜನಗಳಿಗೆ ಇರುವ ಕಷ್ಟವನ್ನು ಅರಿತಿದ್ದಾರೆ. ಹೀಗಿದ್ದರೂ ಕೂಡ ಏನೂ ಕೆಲಸ ಆಗದೇ ಇರುವುದರಿಂದ ಈ ಸಭೆಯ ಮೂಲಕ ಸರ್ಕಾರದ ಗಮನಕ್ಕೆ ತಂದರೆ ಏನಾದರೂ ಉಪಯೋಗವಾಗಬಹುದು ಎಂದು ಈ ಪ್ರಶ್ನೆಯನ್ನು ಕೊಟ್ಟಿದ್ದೇನೆ; ಬೇರೆ ದೃಷ್ಟಿಯಿಂದಲ್ಲ. ನಮ್ಮ ಮನಸ್ಸಿಗೆ ಸ್ಯಾಟಿಸ್‌ಫೈ ಆಗುವ ರೀತಿಯಲ್ಲಿ ಸರ್ಕಾರದಿಂದ ಉತ್ತರ ಬಂದರೆ ಅದು ಬಹಳ ಒಳ್ಳೆಯದೆಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ಮಂತ್ರಿಗಳು ಸ್ವಲ್ಪ ಅರ್ಥ ಮಾಡಿಕೊಂಡು ಉತ್ತರವನ್ನು ಹೇಳಬೇಕು. ನಮ್ಮ ಕ್ಷೇತ್ರದ ಜನರು ನಿಜವಾಗಿಯೂ ಕಷ್ಟದಲ್ಲಿದ್ದಾರೆ. ಇದು ಮಂತ್ರಿಗಳಿಗೆ ಅರ್ಥವಾಗಿದೆಯೋ ಏನೋ ನನಗೆ ಗೊತ್ತಿಲ್ಲ?

ಶ್ರೀ ಬಿ. ಬಸವಲಿಂಗಪ್ಪ:– ಅಧ್ಯಕ್ಷರೆ ಶ್ರೀಮಾನ್ ನಂಜಪ್ಪನವರು ನಾನು ಹೇಳಿದ ಉತ್ತರವನ್ನು ಕೇಳಿಬಿಟ್ಟು ತೃಪ್ತರಾಗುತ್ತಾರೆಂದು ತಿಳಿಕೊಂಡಿದ್ದೆ. ನಾನು ವಿವರವಾಗಿ ಹೇಳುತ್ತೇನೆ. ನಿಮ್ಮ ತಾಲ್ಲೂಕಲ್ಲಿ 1056 ಕೊಳವೆಬಾವಿಗಳನ್ನು ನಾವು ತೋಡಿದ್ದೇವೆ ಕೆಟ್ಟುಹೋಗಿರತಕ್ಕಂಥ ಬಾವಿಗಳು 94 ಇವೆ. ಹೊಸದಾಗಿ 30 ಕೊಳವೆ ಬಾವಿಗಳನ್ನು ಪುನಃ 18 ಗ್ರಾಮದಲ್ಲಿ ತೋಡಿದ್ದೇವೆ. ಅವು ಸರಿಯಾಗಿ ಕೆಲಸಮಾಡುತ್ತವೆಂದು ವರದಿ ಬಂದಿದೆ. ಅನಂತರ ಚನ್ನರಾಯಪಟ್ಟಣ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗ ಒಂದು ಪ್ರಸ್ತಾವನೆ ಮೇರೆಗೆ 84 ಹಳ್ಳಿಗಳಲ್ಲಿ ಅಭಾವ ಪರಿಸ್ಥಿತಿ ಇದೆ ಎಂದು ಹೇಳಿದ್ದಾರೆ, ಅದಕ್ಕೆ ತೀವ್ರವಾಗಿ ಗಮನಕೊಟ್ಟಿದ್ದು ಈ ತರಹ ಎಲ್ಲೆಲ್ಲಿ ಅಭಾವ ಪರಿಸ್ಥಿತಿ ಇದೆ ಯಾವ ಯಾವ ಹಳ್ಳಿಗಳಲ್ಲಿ ಈ ಪರಿಸ್ಥಿತಿ ಇದೆ ಅಲ್ಲಿ ಪರಿಶೀಲನೆ ಮಾಡಿ ತಕ್ಷಣ ಕೊಳವೆಬಾವಿಗಳನ್ನು ಕೊರೆಯತಕ್ಕಂಥದ್ದು, ಮತ್ತು ನೀರಿನ ಸೌಕರ್ಯ ಒದಗಿಸಬೇಕೆಂದು ಹೇಳಿ 31–10–90ರಲ್ಲಿ ಒಂದು ಆದೇಶವನ್ನು ಕೊಟ್ಟಿದ್ದೇವೆ. ಈಗ ಪ್ರಕೃತಿ ವಿಕೋಪದಿಂದ ಪರಿಹಾರ ನಿಧಿ 20 ಲಕ್ಷರೂಪಾಯಿ ಹಾಸನ ಜಿಲ್ಲೆಗೆ ಒದಗಿಸಿದ್ದೇವೆ. ಆ ಹಣವನ್ನು ಉಪಯೋಗಿಸಿಕೊಂಡು ಈ ಕೊಳವೆಬಾವಿಗಳನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡಬೇಕು. ಹೀಗೆ ಎಲ್ಲೆಲ್ಲಿ ಅಭಾವ ಪರಿಸ್ಥಿತಿ ಇದೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳಲಿಕ್ಕೆ ಅವಕಾಶವಾಗುತ್ತದೆ. ಮತ್ತು ಸುಲಭವಾಗುತ್ತದೆ. ಈಗ 18 ಗ್ರಾಮಗಳ ಬಗ್ಗೆ ಹೇಳಿದ್ದೀರಿ, ಅದರಲ್ಲಿ ನಾವು ತೋಡಿದ್ದೇವೆ. ಪುನಃ ಹೆಚ್ಚಿನ ಅವಶ್ಯಕತೆ ಇದ್ದರೆ ದಯಮಾಡಿ ನನ್ನ ಗಮನಕ್ಕೆ ತರಬೇಕು.

ಶ್ರೀ. ಸಿ. ಬೈರೇಗೌಡ:– ಅಧ್ಯಕ್ಷರೆ, ಹಳ್ಳಿಗಳ ಕಡೆ ಒಂದು ಮಾತನ್ನು ಹೇಳುತ್ತಾರೆ ಕೊಡುವುದನ್ನು ಕೊಟ್ಟರೇ ನಾನು ನೀರಿಗೆ ಹೋಗುತ್ತೇನೆಂದು ಹೇಳುವಂತದ್ದು ಇದೆ. ಆ ರೀತಿ ಮಾನ್ಯ ಬಸವಲಿಂಗಪ್ಪನವರಿಗೆ ಸರಿಯಾಗಿ ಮಾತನಾಡಿಸಿದರೆ ಅವರಿಂದ ಸರಿಯಾದ ರೀತಿ ಉತ್ತರ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್:– ಅಧ್ಯಕ್ಷರೆ, ಮಾನ್ಯ ಬಸವಲಿಂಗಪ್ಪನವರಿಗೆ ಇನ್ನೊಬ್ಬರ ಹತ್ತಿರ ಜಗಳ ಆಡಬೇಕೆನ್ನುವುದೇ ಅವರ ಜಾಯಮಾನ.

ಶ್ರೀ. ಬಿ. ಬಸವಲಿಂಗಪ್ಪ:– ಬೇರೆಯವರ ಹತ್ತಿರ ಜಗಳ ಆಡುವುದೇ ನನ್ನ ಕೆಲಸವೇನು?

ಶ್ರೀ ವಾಟಾಳ್ ನಾಗರಾಜ್:– ತಮ್ಮ ಮಾತುಕತೆ ನೋಡಿದರೆ ಪ್ರತಿದಿವಸ ಜಗಳಕ್ಕೆ ಬಂದಾಗೆ ಕಾಣುತ್ತದೆ. ಆದ್ದರಿಂದ, ಈ ಮಾತನ್ನು ಹೇಳಿದೆ ಅಷ್ಟೆ.

ಶ್ರೀ. ಎನ್.ಬಿ. ನಂಜಪ್ಪ:– ಸುಮಾರು 100–150 ಗ್ರಾಮಗಳಲ್ಲಿ ಕುಡಿಯಲಿಕ್ಕೆ ನೀರು ಇಲ್ಲ. ಅಲ್ಲದೆ ಒಂದೆರಡು ಕಿಲೋಮೀಟರ್ ದೂರದಿಂದ ನೀರನ್ನು ಹೊತ್ತುಕೊಂಡುಬಂದು ನೀರು ಕುಡಿಯಬೇಕಾದಂಥ ಸ್ಥಿತಿ ಅನೇಕ ಗ್ರಾಮಗಳಲ್ಲಿದೆ. ಅನಂತರ ಯಾರು ಇರಿಗೇಷನ್ ಬೋರೆವೆಲ್‌ಗೆ ಪಂಪ್‌ಸೆಟ್ಟು ಹಾಕಿಕೊಂಡಿದ್ದಾರೆ ಅಂತಹ ಊರುಗಳಲ್ಲಿ ಪ್ರೈವೇಟ್ ಬಾವಿಯಿಂದ ನಾವು ರಿಕ್ವೆಸ್ಟ್ ಮಾಡಿ ಕುಡಿಯುವ ನೀರನ್ನು ಕೊಡಿಸುತ್ತಿದ್ದೇವೆ. ಎಲ್ಲಾ ತರಹದ ಅಪ್ರೋಚ್ ಗವರ್ನ್‌ಮೆಂಟಿಗೆ ಮಾಡಿದ್ದೇವೆ. ಮಾನ್ಯ ಮಂತ್ರಿಗಳು ಇಷ್ಟು ಉತ್ತರ ಮೊದಲೇ ಕೊಟ್ಟಿದ್ದರೆ ನಾವು ಇಷ್ಟು ಮಾತನಾಡತಕ್ಕ ಅವಶ್ಯಕತೆ ಬರುತ್ತಿರಲಿಲ್ಲ ದಯವಿಟ್ಟು ಮಾನ್ಯ ಮಂತ್ರಿಗಳು ಈ ಬಗ್ಗೆ ಗಮನಹರಿಸಿ ಕಷ್ಟ ಪರಿಹಾರ ಮಾಡುತ್ತಾರೆಂದು ನಂಬಿದ್ದೇನೆ.

ಶ್ರೀ. ಬಿ. ಬಸವಲಿಂಗಪ್ಪ:– ನಾನು ಗಮನಕ್ಕೆ ಇಟ್ಟುಕೊಳ್ಳುತ್ತೇನೆ.

ಶ್ರೀ ಬಿ. ಶಿವರಾಮು:– ಅಧ್ಯಕ್ಷರೆ, ಮಾನ್ಯ ಮತ್ರಿಗಳು ಬರಗಾಲಕ್ಕಾಗಿ ಹಾಸನ ಜಿಲ್ಲೆಗೆ ನಾವು 20 ಲಕ್ಷ ರೂಪಾಯಿ ಒದಗಿಸಿದ್ದೇವೆಂದು ಹೇಳಿದ್ದಾರೆ. ನಮ್ಮ ಜಿಲ್ಲೆಯಲ್ಲಿ 5 ತಾಲ್ಲೂಕುಗಳು ಬರಗಾಲಕ್ಕೆ ಒಳಗಾಗಿವೆ. ನಮ್ಮ ಬೇಡಿಕೆ ಸುಮಾರು 60–80 ಲಕ್ಷರೂಪಾಯಿ ಇದೆ. ಡಾ॥ ನಂಜಪ್ಪನವರು ಕುಡಿಯುವ ನೀರಿನ ಪರಿಸ್ಥಿತಿಯ ಬಗ್ಗೆ ನಿಜವಾದಂಥ ಪರಿಸ್ಥಿತಿಯನ್ನು ಹೇಳಿದ್ದಾರೆ. ಈಗಾಗಲೇ ನಮ್ಮಲ್ಲಿ ಚೀಫ್‌ಇಂಜಿನಿಯರ್ ಪಿಹೆಚ್‌ಇ ಅವರು ವಿಸಿಟ್ ಮಾಡಿದ್ದಾರೆ. ಆರ್‌ಡಿ ಸೆಕ್ರೆಟರಿ ಮಾಡಿದ್ದಾರೆ, ರೆವಿನ್ಯೂ ಸೆಕ್ರೆಟರಿಯವರು ಮಾಡಿದ್ದಾರೆ ಅವರ ರಿಪೋರ್ಟ್ ಪ್ರಕಾರ 20 ಲಕ್ಷ ರೂಪಾಯಿ ಒದಗಿಸಬೇಕೆಂದು ಬೇಡಿಕೆ ಇದೆ. ಮಂತ್ರಿಗಳು ಏನಾದರೂ ಹೆಚ್ಚಿನ ಹಣ ಒದಗಿಸಿ ನಮ್ಮ ಜಿಲ್ಲೆಯಲ್ಲಿರತಕ್ಕ ನೀರಿನ ಅಭಾವ ಪರಿಹರಿಸುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ:– ಆಗಬಹುದು.

ಶ್ರೀ. ಬಿ. ಎಸ್. ಯಡಿಯೂರಪ್ಪ:– ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಹಿನ್ನೆಲೆಯಲ್ಲಿ ಕೆಲವು ಪ್ರಶ್ನೆಗಳು ಬಂದಿವೆ. ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುವುದು ಏನೆಂದರೆ ಈಗ ಬೋರ್‌ವೆಲ್ ರಿಪೇರಿ ಕೆಲಸವನ್ನು ಜಿಲ್ಲಾಪರಿಷತ್‌ನವರು ಮಂಡಲ್‌ಪಂಚಾಯಿತಿಗಳಿಗೆ ಕೊಟ್ಟಿದ್ದಾರೆ. ಈಗ ಅವರಲ್ಲಿ ಮೆಕಾನಿಕ್ಸ್ ಇಲ್ಲ ಎಕ್ವಿಪ್‌ಮೆಂಟ್ಸ್ ಇಲ್ಲ, ಲಾರಿಗಳು ಇಲ್ಲ, ಆದರಿಂದಾಗಿ ಅವರಿಂದ ರಿಪೇರಿ ಕೆಲಸ ಮಾಡಿಸಲಿಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ, ತಾವು ಆ ಪದ್ಧತಿಯನ್ನು ವಾಪಸ್ಸು ತೆಗೆದುಕೊಂಡು ಈ ಕೆಲಸ ಜಿಲ್ಲಾಪರಿಷತ್‌ನಿಂದ ಆಗುವಂಥದ್ದು ಮಾಡಬೇಕು. ಸರ್ಕಾರ ಬೇರೆ ಇಲಾಖೆಯಿಂದ ರಿಪೇರಿ ಮಾಡಿಸುವುದು ಮಾಡದಿದ್ದರೆ ಈ ಕೆಲಸ ಆಗುವುದಿಲ್ಲ. ತಾವು ಈ ಬಗ್ಗೆ ಸರ್ವೆ ಮಾಡಿಸಿ ನೋಡಿ ಸುಮಾರು ನೂರಕ್ಕೆ ಎಂಭತ್ತು ಬೋರ್‌ವೆಲ್ಸ್ ಕೆಟವೆ ಈಗ ಲಕ್ಷಾಂತರ ರೂಪಾಯಿಗಳ ಹಣ ಇನ್‌ವೆಸ್ಟ್ ಮಾಡಿದ್ದೀರಿ. ಇದರ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳುವ ವಿಚಾರದಲ್ಲಿ ಮಂತ್ರಿಗಳಿಂದ ಸ್ಪಷ್ಟ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ :– ಇದು ಬಹಳ ಒಳ್ಳೆಯ ಸಲಹೆ ಮೊದಲು ನಾನು ರೂರಲ್ ಡೆವಲಪ್‌ಮೆಂಟ್ ಮಿನಿಸ್ಟರ್ ಇದ್ದಾಗ ಪರಿಹಾರ ಮಾಡಬೇಕೆಂದು ಇದ್ದೆ. ಇದು ಮಂಡಲ್‌ಪಂಚಾಯತ್‌ನಿಂದ ಆಗುವುದಿಲ್ಲ. ಅಲ್ಲಿ ಹಣವೂ ಇಲ್ಲ, ಅವರು ಮಾಡಲಿಕ್ಕಾಗುವುದಿಲ್ಲ ಕಾನೂನು ಪ್ರಕಾರ ಅವರೇ ಮಾಡಬೇಕೆಂದು ಇಟ್ಟಿದ್ದೇವೆ. ಅದರ ಬಗ್ಗೆ ಜಿಲ್ಲಾ ಪರಿಷತ್‌ನಿಂದಲೇ ಮಾಡಬೇಕು ಎನ್ನುವ ತೀರ್ಮಾನವನ್ನು ಶೀಘ್ರದಲ್ಲಿಯೇ ಮಾಡುತ್ತೇವೆ.

ಶ್ರೀ ಜೆ. ಸಿ. ಮಾಧುಸ್ವಾಮಿ:– ಸುಮಾರು ನಾಲ್ಕೈದು ಬೋರ್‌ವೆಲ್ ಫೈಲ್ ಆದರೂ ಕೂಡ ಮತ್ತೆ ಅಲ್ಲಿಯೇ ಬೋರ್‌ವೆಲ್ ಹಾಕುವ ಪ್ರಯತ್ನ ಮಾಡುವ ಬದಲು ಮಿನಿವಾಟರ್ ಸ್ಕೀಮ್ ಹಾಕುವಂಥದ್ದನ್ನು ಅಗತ್ಯತೆ ಮೇಲೆ ತೆಗೆದುಕೊಂಡರೆ ಸುಮಾರು ಹಳ್ಳಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಬಹುದುದೆಂದು ಭಾವಿಸುತ್ತೇನೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಹೇಳಬೇಕು.

ಶ್ರೀ ಬಿ. ಬಸವಲಿಂಗಪ್ಪ :– ಅಂತಹ ಬೇಡಿಕೆಗಳು ಬಂದರೆ ಪರಿಶೀಲನೆ ಮಾಡುತ್ತೇನೆ.

SRI M.V. Venkatappa:-This is with regard to another question. Mr.Narayanaswamy is absent. This is an important question for our Kolar district. ಕಳೆದ 8 ತಿಂಗಳಿಂದ ಒಂದು ಕೆಲಸವೂ ಕೂಡ ನಡೆಯುತ್ತಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್:– ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಈ ವರ್ಷ 20 ಲಕ್ಷ ರೂ. ಗಳನ್ನು ಡ್ರೌಟ್‌ರಿಲೀಫ್‌ಗೋಸ್ಕರ ರಿಲೀಸ್ ಮಾಡಿದ್ದೇನೆಂದು ಹೇಳಿದ್ದಾರೆ. ನಮ್ಮ ಜಿಲ್ಲೆಗೆ 10 ಲಕ್ಷರೂ ಎಂದು ಹೇಳಿದ್ದಾರೆ. ಈಗ ಒಂದೊಂದು ತಾಲೂಕಿಗೆ ಒಂದೊಂದು ಲಕ್ಷ ರೂ. ಬೇಕಾಗುತ್ತದೆ ಅಂದರೆ ಒದಗಿಸಿರುವ ಹಣದಿಂದ ಒಂದೊಂದು ತಾಲೂಕಿನಲ್ಲಿ 5 ಬೋರ್‌ವೆಲ್‌ಗಳಿಗೆ ಮೇಲೆ ಕೊರೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಇದರಿಂದ ಬರಗಾಲವನ್ನು ಯಾವರೀತಿ ಪರಿಹಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಒಂದೊಂದು ತಾಲೂಕಿಗೆ ಕನಿಷ್ಠ 10 ಲಕ್ಷ ರೂ ಆದರೂ ರಿಲೀಸ್ ಮಾಡಿದರೆ ಪರಿಸ್ಥಿತಿಯನ್ನು ನಾವು ನಿವಾರಿಸುವುದಕ್ಕೆ ಸಾಧ್ಯವಾಗುತ್ತದೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ: –ಮಾನ್ಯ ಸಭಾಧ್ಯಕ್ಷರೆ, ಇದು ಕಂದಾಯ ಇಲಾಖೆಗೆ ಸಂಬಂಧಪಟ್ಟಿದ್ದು.

ಶ್ರೀ ಉಸ್ತಾದ್‌ಮಹಬೂಬ್ ಪಟೇಲ್ ಲಡ್ಲೇಪಟೇಲ್:– ಮಾನ್ಯ ಸಭಾಧ್ಯಕ್ಷರೆ, ನಮ್ಮ ಬಿಜಾಪುರ ಜಿಲ್ಲೆ ಶಾಶ್ವತವಾಗಿ ಬರಗಾಲಕ್ಕೆ ಈಡಾಗುತ್ತಿರತಕ್ಕ ಜಿಲ್ಲೆ. ಇಡೀ ರಾಜ್ಯದಲ್ಲಿ ನಮ್ಮ ಬಿಜಾಪುರ ಜಿಲ್ಲೆ ಅತ್ಯಂತ ದೊಡ್ಡದು ಹಾಗೂ ಹಿಂದುಳಿದದ್ದು. ಹಾಸನ ಮತ್ತಿತರ ಜಿಲ್ಲೆಗಳಲ್ಲಿ ಈಸಾರಿ ಬರಗಾಲ ಬಂದಿದ್ದರಿಂದ ಇಷ್ಟೊಂದು ಗಮನವನ್ನು ಹರಿಸುತ್ತಿದ್ದೀರಿ ಇದಕ್ಕೆ ನನ್ನ ಆಕ್ಷೇಪಣೆ ಏನೂ ಇಲ್ಲ. ಆದರೆ ಬಿಜಾಪುರ ಜಿಲ್ಲೆಯಲ್ಲಿ ಈಸಾರಿ ದೊಡ್ಡ ಬರಗಾಲ ಇದೆ. ಅದರಲ್ಲೂ ಇಂಡಿ ಮತಕ್ಷೇತ್ರ, ಸಿಂಧಗಿ ಮತಕ್ಷೇತ್ರಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಅಲ್ಲಿ ಮುಖ್ಯ ಸಮಸ್ಯೆ ಏನಿದೆ ಎಂದರೆ, ಅಲ್ಲಿ ನೀರಿನ ಮಟ್ಟ ಬಹಳ ಕೆಳಗಡೆ ಹೋಗಿದೆ ಅಲ್ಲಿ ಬೋರ್‌ವೆಲ್‌ನ್ನು ಕೊರೆಯುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಅಂತರ್ಜಲ ಇಲಾಖೆಯ ಅಧಿಕಾರಿಗಳು ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಗಳಿಗೆ ನಮ್ಮ ಬಿಜಾಪುರ ಜಿಲ್ಲೆಯ ಬಗ್ಗೆ ಬಹಳ ಚೆನ್ನಾಗಿ ವಿಚಾರ ಗೊತ್ತಿದೆ. ಆದ್ದರಿಂದ ಅವರು ನಮ್ಮ ಜಿಲ್ಲೆಗೆ ಹೆಚ್ಚಿನ ಹಣವನ್ನು ಈ ವರ್ಷಬಿಡುಗಡೆ ಮಾಡುತ್ತಾರೋ, ಇಲ್ಲವೋ ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ:– ಈ ಬಗ್ಗೆ ಬೇಡಿಕೆ ಬಂದಿಲ್ಲ.

ಅಧ್ಯಕ್ಷರು:– ಬರೆದು ಕಳುಹಿಸಿದರೆ ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಎಸ್.ಹೆಚ್. ಕೌಜಲಗಿ:– ಮಾನ್ಯ ಅಧ್ಯಕ್ಷರೆ, ಗಂಗಾ ಕಲ್ಯಾಣ ಯೋಜನೆಯಲ್ಲಿ ಮತ್ತು ಎಸ್.ಸಿ. ಎಸ್.ಟಿ. ಯೋಜನೆಯಲ್ಲಿ ಕೆಲವು ಬೋರ್‌ವೆಲ್‌ಗಳನ್ನು ಕೊರೆದಿದ್ದಾರೆ ಅವುಗಳಲ್ಲಿ ಹೆಚ್ಚು ನೀರು ಬರುವುದಿಲ್ಲವಾದ್ದರಿಂದ ಇರಿಗೇಷನ್ ಸಲುವಾಗಿ ಈ ಬೋರ್‌ವೆಲ್‌ಗಳನ್ನು ಬಳಸಿಕೊಳ್ಳಲು ಆಗುವುದಿಲ್ಲವೆಂದು ಹಾಗೆಯೇ ಬಿಟ್ಟಿದ್ದಾರೆ. ಆದ್ದರಿಂದ ಕುಡಿಯುವ ನೀರಿನ ಸಲುವಾಗಿ ಅವುಗಳಿಗೆ ಕೈ ಪಂಪುಗಳನ್ನು ಕೂಡಿಸಿದರೆ ಕುಡಿಯುವ ನೀರಿಗೆ ಅನುಕೂಲವಾಗುತ್ತದೆ. ಸರ್ಕಾರದವರು ಇದರ ಬಗ್ಗೆ ಕ್ರಮ ತೆಗೆದುಕೊಳುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ:– ಮಾನ್ಯ ಸದಸ್ಯರು ಇದರ ಬಗ್ಗೆ ಬರೆದು ಕಳುಹಿಸಿದರೆ ವಿಷಯವನ್ನು ಪರಿಶೀಲಿಸುತ್ತೇನೆ.

ಅಧ್ಯಕ್ಷರು:– ಬರಧೇ ಇದ್ದಂಥ ಮಾನ್ಯ ಸದಸ್ಯರ ಹೆಸರನ್ನು ಈಗ ಕರೆಯುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ :– ಮಾನ್ಯ ಸಬಾಧ್ಯಕ್ಷರೆ, ಇದು ಬಹಳ ಪ್ರಮುಖವಾದ ಪ್ರಶ್ನೆ.

ಅಧ್ಯಕ್ಷರು:– ನಾನು ಇದರ ಪ್ರಾಮುಖ್ಯತೆಯನ್ನು ತಿಳಿದಿದ್ದೇನೆ.

SRI R.V. Deshpande: The people who have encroached the land, they are just waiting for the last 20-25 years.

ಅಧ್ಯಕ್ಷರು:– ನನ್ನ ಕೈ ಕಟ್ಟಿದೆ.

Sri. R.V. Deshpande:- it is not restricted to me.

Mr. Speaker:- I wish he had authorised you.

Sri. R. V. Deshpande:- My question came on Monday. It lapsed because the house was adjourned.

ಶ್ರೀ ಸಿ. ಬೈರೇಗೌಡ:– ಈ ಪ್ರಶ್ನೆಯನ್ನು ತಾವೇ ಕೇಳಬಹುದು.

Mr. Speaker:- I don't want to.